ಅಧ್ಯಕ್ಷರು: ಸಮಿತಿ ರಚನೆ ಮಾಡುವುದಕ್ಕೆ ಅವರು ಮುಖ್ಯಮಂತ್ರಿಗಳ ಜೊತೆ ಮತ್ತು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತಮಗೆ ತಿಳಿಸುತ್ತಾರೆ.

ಶ್ರೀ ವಾಟಾಳ್‌ನಾಗರಾಜ್: ನಮ್ಮ ಕ್ಷೇತ್ರದಲ್ಲಿ 20 ಸಾವಿರ ಕುಟುಂಬಗಳಿಗೆ ಒಂದು ಮನೆ ಸಹ ಕೊಡಲಿಲ್ಲ. ಸಂತೇಮಾರನಹಳ್ಳಿ, ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಇಲ್ಲಿ ಈ ಜನಾಂಗದವರು ಏನಿದ್ದಾರೆ ಅದರ ಬಗ್ಗೆ ಅಧಿಕಾರಿಗಳು ಪರಿಶೀಲನೆ ಮಾಡಿದ್ದಾರೆಯೆ? ಸುಮ್ಮನೆ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು: ತೀವ್ರ ಪರಿಶೀಲನೆ ಮಾಡುತ್ತಾರೆ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಅಧ್ಯಕ್ಷರೆ, ತಾವು ಬೇಜಾರು ಮಾಡಿಕೊಳ್ಳಬೇಡಿ. ಮಂತ್ರಿಗಳು ಕೊಟ್ಟಿರತಕ್ಕ ಉತ್ತರದಿಂದ ನನಗೆ ತೃಪ್ತಿಯಾಗಿಲ್ಲ ನನಗೆ ಬಹಳ ನೋವಾಗುತ್ತಿದೆ. ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ರಾಜ್ಯದಲ್ಲಿರುವ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹ

40 (192)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ರೇಷ್ಮೆ ಬೆಳೆಗಾರರ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ರೇಷ್ಮೆ ಬೆಳೆ ಅಭಿವೃದ್ಧಿ ಪಡಿಸಲು ಹಾಗೂ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಿಸಲು ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳಾವುವು?

ಶ್ರೀ ಎಂ.ವರದೇಗೌಡ (ರೇಷ್ಮೆ ರಾಜ್ಯ ಸಚಿವರು):

ಅ) 3,33,339 ಅನುಬಂಧದಲ್ಲಿ ಲಗತ್ತಿಸಿದೆ.

ಆ) ಕಾರ್ಯಕ್ರಮಗಳೆಂದರೆ

1. ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ಮತ್ತು ಸಂಶೋಧನಾ ಸಂಸ್ಥೆಗೆ ಸಹಾಯ ಅನುದಾನ.,

2. ವಿಶೇಷ ಘಟಕ ಯೋಜನೆ ಅಡಿಯಲ್ಲಿ ರೇಷ್ಮೆ ವ್ಯವಸಾಯದಾರರಿಗೆ

ಸಹಾಯಧನ: ಪ್ರೋತ್ಸಾಹಧನ.

3. ಮೈಸೂರು ಬಿತ್ತನೆ ಪ್ರದೇಶದಲ್ಲಿ ರೇಷ್ಮೆ ಗೂಡು ಉತ್ಪಾದನೆಗೆ ಬೋನಸ್.

4. ರೋಗ ಮತ್ತು ಊಜಿ ನಿಯಂತ್ರಣ.

5. ಬೈವೋಲ್ಟೈನ್ ರೇಷ್ಮೆ ಹುಳು ಸಾಕಣೆದಾರರಿಗೆ ಮತ್ತು ರೀಲರ್‌ಗಳಿಗೆ ಉತ್ತೇಜನ.

6. ಪ್ರಚಾರ, ವಸ್ತುಪ್ರದರ್ಶನ ಅಧ್ಯಯನ ಪ್ರವಾಸ ಪುಸ್ತಕಗಳು ನಿಯತಕಾಲಿಕೆಗಳು.

7. ರೇಷ್ಮೆ ಕೈಗಾರಿಕೆಯಲ್ಲಿ ಬಂಡವಾಳ ಕಾಮಗಾರಿಗಳು.

8. ಕಟ್ಟಡಗಳು ಸಣ್ಣ ಕಾಮಗಾರಿಗಳು.

9. ಶೈತ್ಯಾಗಾರಗಳ, ನಿರ್ವಹಣೆ.

10. ರಾಷ್ಟ್ರೀಯ ರೇಷ್ಮೆ ಯೋಜನೆ.

11. ರೇಷ್ಮೆ ಕೃಷಿ ಕ್ಷೇತ್ರಗಳು.

12. ಗಿರಿಜನ ಉಪಯೋಜನೆ.

ಅನುಬಂಧ- 1

ರಾಜ್ಯದಲ್ಲಿರುವ ರೇಷ್ಮೆ ಬೆಳೆಗಾರರ ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆ	ರೇಷ್ಮೆ ಬೆಳೆಗಾರರ ಸಂಖ್ಯೆ
1.	ಬೆಂಗಳೂರು (ನಗರ)	4,641
2.	ಬೆಂಗಳೂರು (ಗ್ರಾಮಾಂತರ)	51,700
3.	ಬೆಳಗಾಂ	3,396
4.	ಬಳ್ಳಾರಿ	1,582
5.	ಬೀದರ್	706
6.	ಬಿಜಾಪುರ	990
7.	ಬಾಗಲಕೋಟೆ	1,054
8.	ಚಿಕ್ಕಮಗಳೂರು	2,712
9.	ಚಿತ್ರದುರ್ಗ	5,842
10.	ದಾವಣಗೆರೆ	1,289
11.	ದಕ್ಷಿಣಕನ್ನಡ	2,197
12.	ಉಡುಪಿ	1,140
13.	ಧಾರವಾಡ	94
14.	ಗದಗ್	506
15.	ಹಾವೇರಿ	869
16.	ಗುಲ್ಬರ್ಗಾ	2,837
17.	ಹಾಸನ	17,378
18.	ಕೊಡಗು	1,930
19.	ಕೋಲಾರ	68,198
20.	ಮಂಡ್ಯ	54,342
21.	ಮೈಸೂರು	34,786
22.	ಚಾಮರಾಜನಗರ	26,391
23.	ರಾಯಚೂರು	968
24.	ಕೊಪ್ಪಲ್	248
25.	ಶಿವಮೊಗ್ಗ	1,626
26.	ತುಮಕೂರು	19,247
27.	ಉತ್ತರಕನ್ನಡ	1,398
	ಒಟ್ಟು	03,33,339

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ರೇಷ್ಮೆ ಸಚಿವರು ರೇಷ್ಮೆ ಬೆಳೆ ಅಭಿವೃದ್ಧಿ ಪಡಿಸಲು ಹಾಗೂ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಿಸಲು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎನ್ನುವ ಬಗ್ಗೆ 12 ಯೋಜನೆಗಳನ್ನು ಇದರಲ್ಲಿ ಕೊಟ್ಟಿದ್ದಾರೆ. ಈ 12 ಯೋಜನೆಗಳು ಬಹುಶಃ ನನ್ನ ತಿಳುವಳಿಕೆಗೆ ಒಳಪಟ್ಟ ಹಾಗೆ, ರೇಷ್ಮೆ ಇಲಾಖೆಯಲ್ಲಿ ಇರತಕ್ಕಂಥ ಕೆಲವು ಅಧಿಕಾರಿಗಳಿಗೆ ಉಪಯೋಗವಾಗತಕ್ಕಂಥ ಯೋಜನೆಗಳು. ಆದರೆ ರೇಷ್ಮೆ ಬೆಳೆಯತಕ್ಕಂಥ ರೈತರಿಗೆ ಉಪಯೋಗವಾಗತಕ್ಕಂಥ ಯಾವ ಯೋಜನೆಗಳು ಇದರಲ್ಲಿಲ್ಲ. ಈ 12 ಯೋಜನೆಗಳೂ ಕೂಡ ಕೆಳಗಡೆ ಹೋಗುವಾಗ ರೈತನಿಗೆ ಏನೂ ಪ್ರಯೋಜನ ಆಗುವುದಿಲ್ಲ, ಬರೀ ಅಧಿಕಾರಿಗಳಿಗೆ ಮಾತ್ರ ಆಗುತ್ತದೆ. ನಾನು ಮುಖ್ಯವಾಗಿ ಕೇಳತಕ್ಕಂಥದ್ದು ಏನೆಂದರೆ ರೇಷ್ಮೆ ಗೂಡಿನ ಮಾರ್ಕೆಟ್‌ನಲ್ಲಿ ರೈತರಿಗೆ ಆಗುವ ಅನ್ಯಾಯವನ್ನು ತಡೆಯುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಬಿತ್ತನೆ ಗೂಡಿಗೆ ಬೆಲೆ ನಿಗದಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇದರ ಬಗ್ಗೆ ತಾವು ದಯವಿಟ್ಟು ಉತ್ತರ ಕೊಡಬೇಕು. ಸಾಮಾನ್ಯ ರೇಷ್ಮೆಗೆ, ಬೆಲೆ ನಿಗದಿ ಮಾಡತಕ್ಕಂಥದ್ದು ಮತ್ತು ವಿಶ್ವಬ್ಯಾಂಕಿನಿಂದ ಹೇರಳವಾಗಿ ನಿಮ್ಮ ರೇಷ್ಮೆ ಇಲಾಖೆಗೆ ಹಣ ಬರುತ್ತಿದೆ. ವಿಶ್ವಬ್ಯಾಂಕಿನಿಂದ ಬರುತ್ತಿರುವ ಹಣ ಯಾವ ರೀತಿಯಲ್ಲಿಯೂ ಉಪಯೋಗ ಆಗಿಲ್ಲ. ಅವರು ಕೊಟ್ಟಿರತಕ್ಕಂಥ ಬಿಲ್ಡಿಂಗ್‌ಗಳು ಮತ್ತು ಜೀಪ್‌ಗಳು ಉಪಯೋಗ ಆಗುತ್ತಿಲ್ಲ, ಅವು ಎಲ್ಲೆಂದರೆ ಅಲ್ಲಿ ಬಿದ್ದಿವೆ, ಇದರಿಂದ ರೈತರಿಗೆ ಏನು ಪ್ರಯೋಜನ ಆಗಿಲ್ಲ. ಆದರೆ ವಿಶ್ವಬ್ಯಾಂಕಿನಿಂದ ಬಂದಿರುವ ಹಣವನ್ನು ಏನು ಮಾಡಿದ್ದೀರಿ, ಮತ್ತು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ದಯಮಾಡಿ ಹೇಳಬೇಕು.

ಶ್ರೀ ಎಂ.ವರದೇಗೌಡ: ಮಾನ್ಯ ಅಧ್ಯಕ್ಷರೇ, ವಿಶ್ವಬ್ಯಾಂಕಿನ ನೆರವು ಹೋದ ವರ್ಷ ಡಿಸೆಂಬರ್ ತಿಂಗಳಿಗೆ ಅಂತ್ಯಗೊಂಡಿತು. ನಾನು ಮಂತ್ರಿ ಆದ ಮೇಲಂತೂ ವಿಶ್ವಬ್ಯಾಂಕಿನಿಂದ ಹಣ ಬರುತ್ತಿಲ್ಲ. ಇದಕ್ಕೆ ಹಣವನ್ನು ರಾಜ್ಯಸರ್ಕಾರವೇ ಬಜೆಟ್‌ನಲ್ಲಿ ಭರಿಸತಕ್ಕದ್ದು. ಆದರೆ ಹಿಂದೆ ವಿಶ್ವಬ್ಯಾಂಕಿನ ನೆರವಿನಿಂದ ಬಿಲ್ಡಿಂಗ್‌ಗಳನ್ನು ಮತ್ತು ಶೈತ್ಯಾಗಾರಗಳನ್ನು ಮಾಡಿದ್ದಾರೆ, ಆದರೆ ಇವು ಉಪಯೋಗ ಇಲ್ಲದಂತೆ ಇರತಕ್ಕಂಥದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಬೀದರ್ ಮತ್ತು ಬಳ್ಳಾರಿ ಜಿಲ್ಲೆಗೆ ಹೋಗಿ ಮಾಡಲ್ ಗ್ರೈನೇಜ್ ಕಟ್ಟಿದ್ದಾರೆ, ಇವುಗಳನ್ನು ಈಗ ಕಿತ್ತು ಹಾಕುವುದಕ್ಕೆ ಆಗುವುದಿಲ್ಲ. ಇವತ್ತು ಗೂಡಿನ ಬೆಲೆಯನ್ನು ನಿಗದಿ ಮಾಡುವುದಕ್ಕೆ ಅಂದರೆ ಒಂದೇ ರೇಟ್ ಇರುವಂತೆ ಮಾಡಲು ಒಂದು ಸಮಿತಿಯನ್ನು ರಚನೆ ಮಾಡಬೇಕು. ಈ ಸಮಿತಿಗೆ ರೈತರು ಮತ್ತು ಡೀಲರ್ಸ್, ಅಧಿಕಾರಿಗಳನ್ನು ಸೇರಿಸಿ ರಚನೆ ಮಾಡಲು ತೀರ್ಮಾನ ಮಾಡಿದ್ದೇವೆ. ಈ ಇಲಾಖೆ ಒಂದು ಸೂಕ್ಷ್ಮವಾದಂಥದ್ದು, ಇವತ್ತು ಸೀಡ್ ಏರಿಯಾದಲ್ಲಿರಬಹುದು ಅಥವಾ ಬಿತ್ತನೆ ಗೂಡು ತಯಾರು ಆಗುವ ಏರಿಯಾದಲ್ಲಿರಬಹುದು, ಇವತ್ತು ರೋಗ ಬಂದರೆ 2 ವರ್ಷ ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಔಷಧಿಯನ್ನು

ಕೊಡಬೇಕಾಗುತ್ತದೆ. ರೈತರು ರೇಷ್ಮೆ ಹುಳು ಸಾಕಣಿಕೆ ಮಾಡಲು ಸುಮಾರು 3,236 ಮನೆಗಳನ್ನು ಕಟ್ಟಲು ಗುರಿಯನ್ನು ಇಟ್ಟುಕೊಂಡಿದ್ದೇವೆ. ಹಿಂದಿನ ವರ್ಷವು 5000 ಮನೆಗಳನ್ನು ಕಟ್ಟಬೇಕು ಎನ್ನತಕ್ಕಂಥದ್ದು, ಅದರಲ್ಲಿ ಸಾಮಾನ್ಯ ಜನರಿಗೆ 25 ಪರ್ಸೆಂಟ್, ಹರಿಜನ ಗಿರಿಜನರಿಗೆ 60 ಪರ್ಸೆಂಟ್‌ನಷ್ಟು ಸಬ್‌ಸಿಡಿ ಕೊಡತಕ್ಕಂಥ ಕಾರ್ಯಕ್ರಮ ಇದೆ. ಈ ವರ್ಷ ಉಪ್ಪೇರಳೆ ಕಡ್ಡಿ ನಾಟಿ ಮಾಡತಕ್ಕಂಥವರಿಗೆ ಡ್ರಿಪ್ ಇರಿಗೇಷನ್ ಶೇಕಡ 50 ರಷ್ಟು ಸಬ್ಸಿಡಿ ಕೊಡುವಂಥದ್ದು ಮತ್ತು ದಾರದಲ್ಲಿ ನಾವು ಇನ್ನೂ ಇಂಪ್ರೂವ್‌ಮೆಂಟ್ ಆಗಿರಲಿಲ್ಲ, ಆದರೆ ಮಲ್ಟಿ ಎಂಡ್ ಬೇಸಿನ್ ಎಂದು ಹೊಸದಾಗಿ ಇಂಟ್ರೊಡ್ಯೂಸ್ ಮಾಡಿ ಉತ್ತಮವಾದಂಥ ದಾರ ತಯಾರು ಮಾಡುವ ದೃಷ್ಟಿಯಿಂದ ರಾಜ್ಯ ಸರ್ಕಾರ 10 ಪರ್ಸೆಂಟ್ ಮತ್ತು ಕೇಂದ್ರ ಸರ್ಕಾರ 25 ಪರ್ಸೆಂಟ್ ಸಬ್‌ಸಿಡಿ ಕೊಡತಕ್ಕಂಥದ್ದು ಮತ್ತು 10 ವರ್ಷಗಳ ಕಾಲ ಬಡ್ಡಿ ರಹಿತ ಸಾಲವನ್ನು ಕೊಡತಕ್ಕಂಥ ಈ ರೀತಿಯ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು 12 ಕಾರ್ಯಕ್ರಮಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಇವೆಲ್ಲವೂ ಅಧಿಕಾರಿಗಳಿಗೆ ಮತ್ತು ಮಧ್ಯವರ್ತಿಗಳಿಗೆ ಪ್ರಯೋಜನವಾಗುತ್ತದೆ. ನಾನು ನಿರ್ದಿಷ್ಟವಾಗಿ ಕೇಳುವುದೇನೆಂದರೆ ರೇಷ್ಮೆಗೂಡಿನ ಮಾರ್ಕೆಟ್‌ನಲ್ಲಿ ರೈತನಿಗೆ ಆಗುತ್ತಿರುವ ಅನ್ಯಾಯ ಮತ್ತು ತೊಂದರೆಯನ್ನು ಸರಿಪಡಿಸಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಮತ್ತು ಬಿತ್ತನೆ ಗೂಡಿಗೆ ಸರಿಯಾದಂತ ಬೆಲೆಯನ್ನು ನಿಗದಿ ಮಾಡತಕ್ಕಂಥ ಕಾರ್ಯಕ್ರಮ ಏನಾದರೂ ಸರ್ಕಾರದ ಮುಂದೆ ಇದೆಯಾ? ವಿಶ್ವಬ್ಯಾಂಕಿನಿಂದ ಬರುವ ನೆರವು ಮುಗಿದು ಹೋಯಿತು ಎಂದು ಹೇಳಿದ್ದೀರಿ, ಆದರೆ ಅವರು ಕಟ್ಟಿಸಿಕೊಟ್ಟಿರುವ ಬಿಲ್ಡಿಂಗ್‌ಗಳು ಮತ್ತು ಕೊಟ್ಟಿರುವ ಜೀಪ್‌ಗಳು ನಿರುಪಯುಕ್ತವಾಗಿರುವುದನ್ನು ಯಾವ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುತ್ತೀರೆಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಂ.ವರದೇಗೌಡ: ಮಾನ್ಯ ಅಧ್ಯಕ್ಷರೆ, ಈಗ ಇರತಕ್ಕಂಥ ತೂಕದ ಹಳೇ ಮಿಷನ್‌ಗಳನ್ನು ತೆಗೆಯಬೇಕೆಂಬ ತೀರ್ಮಾನವನ್ನು ತೆಗೆದುಕೊಂಡು, ಎಲ್ಲಾ ಮಾರ್ಕೆಟ್‌ಗಳಿಗೆ ಸ್ಯಾಂಪಲ್ ಆಗಿ ಒಂದೊಂದು ಕಂಪ್ಯೂಟರ್‌ಗಳನ್ನು ಅಳವಡಿಸುತ್ತಿದ್ದೇವೆ. ಹಂತ ಹಂತವಾಗಿ ಎಲ್ಲಾ ಮಾರ್ಕೆಟ್‌ಗಳಲ್ಲಿ ಈ ಮೆಷಿನರಿಗಳನ್ನು ಅಳವಡಿಸುತ್ತೇವೆ. ಏಕೆಂದರೆ ಗೂಡಿನ ತೂಕದಲ್ಲಿ ಶೋಷಣೆ ಆಗಿತ್ತು. ಆದ್ದರಿಂದ ಈ ಕಾರ್ಯವನ್ನು ಮಾಡುತ್ತಿದ್ದೇವೆ. ಇವತ್ತು ಗೂಡಿಗೆ ನಿಗದಿತ ಬೆಲೆ ದೊರೆಯುವಂತೆ ಒಂದು ಸಮಿತಿಯನ್ನು ರಚನೆ ಮಾಡಲು ತೀರ್ಮಾನ ತೆಗೆದುಕೊಂಡಿದ್ದೇವೆ, ಇದಕ್ಕೆ ಸರ್ಕಾರದ ಆದೇಶವೂ ಕೂಡ ಆಗಿದೆ, ಇನ್ನು ಒಂದು ವಾರದಲ್ಲಿ ಆ ಸಮಿತಿಯನ್ನು ಘೋಷಣೆ ಮಾಡುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಸಮಿತಿ ರಚನೆ ಮಾಡುವುದು

ಮುಖ್ಯವಲ್ಲ, ರೈತರಿಗೆ ಮಾರ್ಕ್ಟ್‌ನಲ್ಲಿ ಯಾವರೀತಿ ಮೋಸ ವಂಚನೆ, ಅನ್ಯಾಯವಾಗುತ್ತದೆಂದು ನಮಗೂ, ನಿಮಗೂ ಗೊತ್ತಿದೆ. ಅದಕ್ಕೆ ದಯವಿಟ್ಟು ಏನು ಮಾಡುತ್ತೀರಿ?

ಅಧ್ಯಕ್ಷರು: ಶ್ರೀರಾಮರೆಡ್ಡಿಯವರೆ ಯಾವರೀತಿ ಸುಧಾರಣೆ ಮಾಡಬೇಕೆಂದು ನೀವೇ ಹೇಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಹೇಳುವುದು ಏನೆಂದರೆ, ಮಾರ್ಕೆಟ್‌ಗೆ ಹೋದ ತಕ್ಷಣ ಸ್ಯಾಂಪಲ್ ಎಂದು ರೇಷ್ಮೆ ಗೂಡನ್ನು ತೆಗೆದುಕೊಳ್ಳುತ್ತಾರೆ, ಈ ರೀತಿ ಸ್ಯಾಂಪಲ್ ಎಂದು ಏನು ತೆಗೆದುಕೊಳ್ಳುತ್ತಾರೆ, ಅದರಿಂದ ಸಾವಿರಾರು ರೂಪಾಯಿ ಲೂಟಿ ಮಾಡುತ್ತಾರೆ. ಅದನ್ನು ತಡೆ ಹಿಡಿಯುವುದಕ್ಕೆ ಅಲ್ಲಿನ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವುದಿಲ್ಲ. ಅಲ್ಲಿ ಇರತಕ್ಕಂಥ ಅಧಿಕಾರಿಗಳು ಮತ್ತು ದಲ್ಲಾಳಿಗಳನ್ನು ತೆಗೆಯಬೇಕು.

ಅಧ್ಯಕ್ಷರು: ಸರ್ಕಾರಿ ಅಧಿಕಾರಿಗಳು ಅಲ್ಲಿ ಇರಲೇಬೇಕು ಅವರೂ ಸಹ ಮನುಷ್ಯರೇ. ಅದರಲ್ಲಿ ಒಬ್ಬ ಒಳ್ಳೆಯವನು, ಒಬ್ಬ ಕೆಟ್ಟವನು ಇರುತ್ತಾರೆ, ನಾವು ಮೊದಲು ರೈತ ಜನಕ್ಕೆ ಹೆಚ್ಚು ವಿದ್ಯೆಯನ್ನು ಕೊಟ್ಟು ತಿಳುವಳಿಕೆ ಬರುವಂತೆ ಮಾಡಬೇಕು. That is more important, ತೂಕದಲ್ಲಿ ಹೆಚ್ಚು ಕಡಿಮೆ ಆಗುವುದನ್ನು ಅವರು ಗಮನಿಸಬಹುದು. ರೈತರನ್ನು ವಿದ್ಯಾವಂತರನ್ನಾಗಿ ಮಾಡಲು ನಿಮ್ಮ ಕಮ್ಯುನಿಸ್ಟ್ ಪಾರ್ಟಿಯವರು ಕೆಲಸ ಮಾಡಬೇಕು. ಈ ಕೆಲಸವನ್ನು ವರದೇಗೌಡರಿಗೆ ಒಪ್ಪಿಸಿದರೆ ಹೇಗೆ; ನಿಮ್ಮ ಕೆಲಸ ಬೇರೆ ಅವರ ಕೆಲಸ ಬೇರೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ರೈತರು ಗಲಾಟೆ ಮಾಡದೆ ಇರತಕ್ಕಂಥ ಪರಿಸ್ಥಿತಿಯಲ್ಲಿದ್ದಾರೆ. ರೇಷ್ಮೆ ಮಾರ್ಕೆಟ್‌ನಲ್ಲಿ ಅಧಿಕಾರಿಗಳು ಮತ್ತು ದಲ್ಲಾಳಿಗಳು ಸೇರಿಕೊಂಡು ಎಬಿಸಿ ಎಂದು ಡಿ-ಗ್ರೇಡ್ ಮಾಡುತ್ತಾರೆ. ಇವರು ಗೂಡಿನ ಬೆಲೆಯನ್ನು 100 ರೂಪಾಯಿಂದ 75 ರೂಪಾಯಿಗೆ, 75 ರೂಪಾಯಿಂದ 50 ರೂಪಾಯಿಗೆ ತರುತ್ತಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾರ್ಕೆಟ್‌ನಲ್ಲಿ ರೈತರು ಗಲಾಟೆ ಮಾಡಿದರೆ ಅವರಿಗೆ ಹಣ ಕೊಡುವುದರಲ್ಲಿ ಎರಡು ದಿವಸ ಕಾಯಿಸುತ್ತಾರೆ. ಇದರಿಂದ ಗಲಾಟೆ ಮಾಡದೆ ಇವತ್ತು ಸುಮ್ಮನಾಗಿ ಬಿಟ್ಟಿದ್ದಾರೆ.

ಅಧ್ಯಕ್ಷರು: ಹಾಲಿನ ಸೊಸೈಟಿಯಲ್ಲಿ ಹಾಲನ್ನು ಟೆಸ್ಟ್ ಮಾಡುವವರ ಜೊತೆ ಜಗಳ ಮಾಡಿಕೊಂಡರೆ ನಿಮ್ಮ ಹಾಲನ್ನು ಹಿಂದಕ್ಕೆ ಕಳುಹಿಸುತ್ತಾರೆ. ನಾನೇನೂ ಫಾರಿನ್‌ನಿಂದ ಬಂದಿಲ್ಲ ನನಗೂ ಸ್ವಲ್ಪ ಗೊತ್ತಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ತಾವು ಹೇಳುವುದು ಸರಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ರೇಷ್ಮೆ ಬೆಳೆಯನ್ನು ಅಭಿವೃದ್ಧಿ ಪಡಿಸಲು ವಿಶೇಷವಾಗಿ 50 ಪರ್ಸೆಂಟ್ ಸಬ್ಸಿಡಿಯನ್ನು ಡ್ರಿಪ್ ಇರಿಗೇಷನ್‌ಗೆ ಕೊಡುತ್ತೇವೆಂದು ಹೇಳಿದ್ದೀರಿ. ಹಾರ್ಟಿಕಲ್ಚರ್ ಮತ್ತು ಕೃಷಿ ಇಲಾಖೆಯಲ್ಲಿ ಮಹಿಳೆಯರಿಗೆ 90 ಪರ್ಸೆಂಟ್, ಪುರುಷರ ಹೆಸರಿನಲ್ಲಿದ್ದರೆ 70 ಪರ್ಸೆಂಟ್ ಸಬ್ಸಿಡಿ ಕೊಡುತ್ತೀರಿ, ಇದಕ್ಕೆ ಏಕೆ 50 ಪರ್ಸೆಂಟ್ ಎಂದು ಮಾಡಿದ್ದೀರಿ? ಇದಕ್ಕೆ ನಿಜವಾಗಲೂ ಹೇಳುವುದಾದರೆ 100 ಪರ್ಸೆಂಟ್ ಸಬ್ಸಿಡಿ ಹಣವನ್ನು ಕೊಡಬೇಕಾಗುತ್ತದೆ. ಏಕೆಂದರೆ ವಾಣಿಜ್ಯ ಬೆಳೆ, ಬಹಳ ಡೆಲಿಕೇಟ್ ಮತ್ತು ಪ್ರಕೃತಿ ವಿಕೋಪಕ್ಕೆ ಸಿಲುಕಿ ಅನಾನುಕೂಲದಿಂದ ಬೆಳೆಯತಕ್ಕಂಥ ಬೆಳೆ, ಎರಡನೆಯದು, ಈಗ ಅತಿ ವಿಶೇಷವಾಗಿ ರೇಷ್ಮೆ ಬೆಳೆಯನ್ನು ಸರಳೀಕರಣಗೊಳಿಸಿ, ಶೂಟ್‌ರೇರಿಂಗ್‌ಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಜೊತೆಗೆ ಸಹಕಾರಿ ಸಂಘ ಸಂಸ್ಥೆಗಳಿಂದಲೂ ಇವರಿಗೆ ಆದ್ಯತೆ ಸಿಗಬೇಕು. ಏಕೆಂದರೆ ಒಬ್ಬ ರೈತ ಶೂಟ್‌ರೇರಿಂಗ್ ಮಾಡಬೇಕಾದರೆ ಒಂದು ಕಡೆ ಆಡು ಮತ್ತು ದನಗಳನ್ನು ಕಟ್ಟಿಕೊಂಡು, ಸಂಸಾರದ ಸಮೇತ ಚಿಕ್ಕ ಚಿಕ್ಕ ಮನೆಗಳಲ್ಲಿ ಮತ್ತು ಬಡತನದಲ್ಲಿ ರೇಷ್ಮೆಗೂಡನ್ನು ಬೆಳೆಯುವುದಕ್ಕೆ ಬಹಳ ಅನಾನುಕೂಲವಾಗುತ್ತದೆ.

ಅಧ್ಯಕ್ಷರು: ಪುಟ್ಟಣ್ಣಯ್ಯನವರೆ, ನೀವು ಮತ್ತು ಡಿ.ಆರ್.ಪಾಟೀಲ್ ಮಾತನಾಡಿ ಮಾಡಿದ ನಮ್ಮ ಶಾಸಕಾಂಗ ರೈತರ ವೇದಿಕೆಯಲ್ಲಿ ಈ ವಿಷಯಗಳನ್ನು ಅಲ್ಲಿ ಚರ್ಚೆ ಮಾಡಬಹುದು. ಇಂಥ ಪ್ರಮುಖ ವಿಷಯಗಳನ್ನು ಚರ್ಚೆ ಮಾಡುವಾಗ ಮಂತ್ರಿಗಳನ್ನು ಕರೆದು ಚರ್ಚೆ ಮಾಡಬಹುದು. ಆದುದರಿಂದ ನೀವು ಮತ್ತು ಡಿ.ಆರ್.ಪಾಟೀಲ್ ಮಾತನಾಡಿ, ಇವತ್ತು ಮಧ್ಯಾಹ್ನ ಬೇಕಾದರೆ ಫೈನಲೈಸ್ ಮಾಡೋಣ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಶೂಟ್ ರೇರಿಂಗ್ ಬಗ್ಗೆ ಹೆಚ್ಚು ಒತ್ತುಕೊಟ್ಟು, ಸುಮಾರು 60ರಿಂದ 70 ಪರ್ಸೆಂಟ್ ಲೇಬರ್ ಉಳಿಯುತ್ತದೆ, ಮತ್ತು ಅನುಕೂಲ ಕೂಡ ಆಗುತ್ತದೆ; ಅದರ ಬಗ್ಗೆ ಬಹಳ ತ್ವರಿತವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಸನ್ಮಾನ್ಯ ಅಧ್ಯಕ್ಷರೆ, ಮೈಸೂರು ಬಿತ್ತನೆ ವಲಯದಲ್ಲಿ, ಬಿತ್ತನೆಗೆ ಹೋಗದೆ ಇರತಕ್ಕಂಥ ಗೂಡಿಗೆ ಬೋನಸ್ ಕೊಡತಕ್ಕಂಥ ವ್ಯವಸ್ಥೆ ಏನು ಇದೆ, ಇದರಿಂದ ರೇಷ್ಮೆ ಬೆಳೆಗಾರರಿಗೆ ಬಹಳ ತಾರತಮ್ಯವಾಗುತ್ತದೆ. ಬಹಳ ವರ್ಷಗಳಿಂದ ಬೋನಸ್ ಹೆಚ್ಚಿಗೆ ಮಾಡಿ ಎಂದು ರೈತರ ಬೇಡಿಕೆ ಇದೆ, ಬೋನಸ್ ಜಾಸ್ತಿ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರೋ? ರೇಷ್ಮೆ ಬೆಳೆಯಲ್ಲಿ ಎಲ್ಲಿ ಮಹಿಳೆಯರಿಗೆ ತರಬೇತಿಯನ್ನು ಕೊಟ್ಟಿದ್ದಾರೆ ಅಲ್ಲಿ ಅಭಿವೃದ್ಧಿ ಚೆನ್ನಾಗಿ ಆಗಿದೆ, ಆದುದರಿಂದ ಮಹಿಳೆಯರಿಗೆ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹವನ್ನು ಕೊಡತಕ್ಕಂಥದ್ದು ಮತ್ತು ತರಬೇತಿ ಕೊಡತಕ್ಕಂಥ ಕಾರ್ಯಕ್ರಮ ಏನಾದರೂ ಹಾಕಿಕೊಂಡಿದ್ದೀರಾ? ಈ ಬೋನಸ್ ಬಗ್ಗೆ ತಾವು ಒಂದು

ನಿರ್ದಿಷ್ಟವಾದ ಹೇಳಿಕೆಯನ್ನು ಹೇಳಬೇಕು.

ಶ್ರೀ ಎಂ.ವರದೇಗೌಡ: ಸನ್ಮಾನ್ಯ ಅಧ್ಯಕ್ಷರೆ, ಶ್ರೀರಾಮರೆಡ್ಡಿಯವರು ಹೇಳಿರುವುದು ನಿಜ. ನಾನು ಬಂದ ಮೇಲೆ ದಲ್ಲಾಳಿಗಳು ಏನಾದರೂ ಮಾರ್ಕೆಟ್‌ಗೆ ಬಂದರೆ ಅಂಥ ಅಧಿಕಾರಿಗಳನ್ನು ಸಸ್ಪೆಂಡ್ ಮಾಡತಕ್ಕಂಥ ಕಟ್ಟುನಿಟ್ಟಿನ ಕಾರ್ಯಕ್ರಮ ಹಾಕಿಕೊಂಡು ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿರುವಂಥ ನಿದರ್ಶನಗಳಿವೆ. ಈಗ ಅಂಥ ದಲ್ಲಾಳಿಗಳು ಯಾರು ಇಲ್ಲ. ಇವತ್ತು ಡ್ರಿಪ್ ಇರಿಗೇಷನ್‌ಗೆ 100ಕ್ಕೆ 100ರಷ್ಟು ಸಬ್ಸಿಡಿ ಕೊಡಬೇಕೆಂದು ಕೇಳಿದ್ದಾರೆ, ನಾವು ಕೇಂದ್ರ ಸರ್ಕಾರದ ಯೋಜನಾ ಆಯೋಗಕ್ಕೆ 90 ಪರ್ಸೆಂಟ್‌ನ್ನಾದರೂ ಕೊಡಬೇಕೆಂದು ಕೇಳಿಕೊಂಡಿದ್ದೆವು, ಆದರೆ ಅದಕ್ಕೆ ಒಪ್ಪದೆ 50 ಪರ್ಸೆಂಟ್‌ಗೆ ಒಪ್ಪಿಗೆಯನ್ನು ಒಂದು ತಿಂಗಳ ಹಿಂದೆ ನೀಡಿದ್ದಾರೆ. ಇವತ್ತು ಮಹಿಳೆಯರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳಿದ್ದಾರೆ. ಇವತ್ತು ಮಹಿಳಾಕಾರ್ಯಾಗಾರಗಳನ್ನು ಪ್ರಾರಂಭ ಮಾಡಿದರೆ ಅಂಥವರಿಗೆ ಹೆಚ್ಚಿನ ಪ್ರೋತ್ಸಾಹಧನವನ್ನು ಕೊಡುವಂತಹ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಪುಟ್ಟಣ್ಣಯ್ಯನವರು ಮನೆಗಳನ್ನು ಕಟ್ಟಿಕೊಡಬೇಕೆಂಬುದನ್ನು ಹೇಳಿದರು, ಈ ಗುರಿಯನ್ನು ನಾವು ಈಗಾಗಲೇ ಹಾಕಿಕೊಂಡಿದ್ದೇವೆ. ಶೂಟ್‌ರೇರಿಂಗ್ ಹೌಸ್‌ಗೆ ಹಿಂದೆ 25 ಸಾವಿರ ಕೊಡುತ್ತಿದ್ದ ಹಣವನ್ನು ಈಗ 32 ಸಾವಿರ ಮಾಡಿ ಅಂಥವರಿಗೆ ಸಬ್ಸಿಡಿ ಕೊಟ್ಟು ಮನೆಯನ್ನು ಕೊಡತಕ್ಕಂಥ ಗುರಿಯನ್ನು ಹಮ್ಮಿಕೊಂಡಿದ್ದೇವೆ. 5 ಸಾವಿರ ಮನೆಗಳನ್ನು ಈ ರಾಜ್ಯಕ್ಕೆ ಕೊಡುತ್ತಿದ್ದೇವೆ. ಇವತ್ತು ರೀಲಿಂಗ್‌ಗೆ ಹೋಗತಕ್ಕಂಥ ಗೂಡಿಗೆ 25 ರೂಪಾಯಿಯಿಂದ 30 ರೂಪಾಯಿ ಮಾಡಬೇಕೆಂದು ಸನ್ಮಾನ್ಯ ಮುದ್ದಹನುಮೇಗೌಡರು ಕೇಳಿದ್ದಾರೆ. ಅದನ್ನು ನಾವು ಈಗಾಗಲೇ ಹಣಕಾಸಿನ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿಂದ ಬಂದ ತಕ್ಷಣ ಅದನ್ನು ಮಾಡಿಕೊಡುತ್ತೇವೆ.

ಅಧ್ಯಕ್ಷರು: ಇವತ್ತು ಚೆನ್ನಾಗಿ ಉತ್ತರ ಹೇಳಿದಿರಿ. ಈಶ್ವರಪ್ಪನವರು, ನೀವು ಡೆಲ್ಲಿಗೆ ಹೋಗೋಲ್ವಾ? ಯಡಿಯೂರಪ್ಪನವರೇ, ನೀವು ಬರೋದಿಲ್ವಾ ಈಶ್ವರಪ್ಪನವರ ಜೊತೆಗೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಇಲ್ಲಿ ನೋಡಿಕೊಳ್ಳುತ್ತಾರೆ.

ನಗರ ಸಭೆ ವ್ಯಾಪ್ತಿಯೊಳಗೆ ಬರುವ ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸುವುದು

41 (209)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಗರಸಭೆ ವ್ಯಾಪ್ತಿ ಒಳಗೆ ಬರುವ ಅಕ್ರಮ ಕಟ್ಟಡಗಳನ್ನು